PEER REVIEWED

# STUDIES IN KARNATAKA HISTORY AND CULTURE

Editors

Prof.R.M.Shadakshariah

Prof.Iranna Pattar



VOLUME- XIX-RESEARCH ARTICALS PRESENTED IN THE 30th SESSION OF THE KARNATAKA HISTORY CONGRESS HELD AT KARNATAK UNIVERSITY, DHARWAD

Scanned with OKEN Scanner

# ಕರ್ನಾಟಕ ಶಾಸನೋಕ್ತ ಕಾಳಾಮುಖರ ಶೈಕ್ಷಣಿಕ ಕೊಡುಗೆಗಳು

**ಡಾ. ವಿಜಯಕುಮಾರ ಎಸ್. ಶೇಕದಾರ**
ಸಹ ಪ್ರಾಧ್ಯಾಪಕರು ಇತಿಹಾಸ ವಿಭಾಗ,
ಶ್ರೀ ಶಾಂತವೀರ ಪದವಿ ಕಾಲೇಜು, ಬಬಲೇಶ್ವರ

**ಡಾ. ಶಿವಾನಂದ ರಂ. ನಾಗಣ್ಣವರ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ವಿ.ಎಂ.ಎಸ್.ಆರ್. ವಸ್ತ್ರದ ಮಹಾವಿದ್ಯಾಲಯ,
ಹುನಗುಂದ

**ಡಾ. ಈರಣ್ಣ ಕೆ. ಪತ್ತಾರ**
ವಿಶ್ರಾಂತ ಪ್ರಾಧ್ಯಾಪಕರು, ಇತಿಹಾಸ ಮತ್ತು
ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಸಿಂಧೂ ಸಂಸ್ಕೃತಿಯ ಕಾಲಾವಧಿಯಲ್ಲಿ ಪಶುಪತಿಯ ರೂಪದಲ್ಲಿ ಶಿವನನ್ನು ಆರಾಧಿಸುತ್ತಿದ್ದ ಶೈವಧರ್ಮವು ವೇದ–ಉಪನಿಷತ್ತುಗಳ ಕಾಲದ ಜನರು ರುದ್ರ ಹಾಗೂ ಪ್ರಜಾಪತಿ, ಶಿವನೆಂಬ ಹೆಸರಿನಿಂದ ಆರಾಧಿಸಲಾರಂಭಿಸಿದರು. ಆದರೆ ಕಾಲಕಳೆದಂತೆ ಶೈವರಲ್ಲಿ ಉಂಟಾದ ತಾತ್ವಿಕ ಭಿನ್ನಾಭಿಪ್ರಾಯದಿಂದಲೋ ಅಥವಾ ವೈಯಕ್ತಿಕ ವಿಚಾರಗಳಿಂದಲೋ ಈ ಧರ್ಮ ಹಲವಾರು ಪ್ರಭೇಧಗಳಲ್ಲಿ ವಿಭಜನೆಗೊಂಡು ನಾಡಿನ ಬೇರೆ ಬೇರೆ ಭಾಗಗಳಲ್ಲಿ ಪ್ರಸಾರ ಹೊಂದುತ್ತಾ ಸಾಗಿದೆ ಎಂಬುದನ್ನು ಶಾಸನಗಳ ಮೂಲಕ ತಿಳಿಯಬಹುದಾಗಿದೆ.

ರಾಷ್ಟ್ರಕೂಟ ಅರಸರಿಂದ ಹೊಯ್ಸಳರಸರ ಕಾಲದವರೆಗಿನ ಶಾಸನಗಳಲ್ಲಿ ಪಾಶುಪತ, ಕಾಳಾಮುಖ, ಕಾಪಾಲಿಕ ಶಾಖೆಗಳ ಬಗ್ಗೆ ತಿಳಿಸುತ್ತವೆ. ಅಂತಹ ಕೆಲವು ಶಾಸನಗಳನ್ನು ಉದಾಹರಿಸುವುದಾದರೆ. ಕ್ರಿ.ಶ. 1071ರ ಗುಲ್ಬರ್ಗಾ ಜಿಲ್ಲೆಯ ಸಗರ **(ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು. 432)** ಶಾಸನದಲ್ಲಿ ಅನಂತಶಕ್ತಿ ಯತಿಯನ್ನು "ಲಾಕುಳಸಿದ್ಧಾಂತ ಸಮುದ್ಧರಣಶೀಲರ್ ಕಾಳಾಮುಖ ಮಹಾವ್ರತ ಪಾಶುಪತ ಶಿವಸಮಯ ಸಮಾನ ಪಕ್ಷಪಾತರ್......." ತರ್ಕಶಾಸ್ತ್ರ ವಿಧಾನ ಪರಿಣತರ್..... ಶ್ರೀಮದನನ್ತಶಕ್ತಿಪಂಡಿತರ್ಗೆ ಬಳಂಜವಯ್ನೂರ್ವರು ಅಯ್ನೂರ್ವಸ್ವಾಮಿಗಳು ಕಾಜಗಾಱಸೆಟ್ಟಿಯಕರು ಸೇರಿ ಶ್ರೀಮನ್ನಕರೇಶ್ವರ ದೇವರ ಮಟದ ತಪೋದನರ್ಗೆ ವಿದ್ಯಾದಾನಕ್ಕೆಂದು ಬ್ರಹ್ಮಚರ್ಯದ ಶಾಸ್ತ್ರಾಗಮಕುಶಳ ಶಿಷ್ಯಸಂತಾನಮಿಳಾನ್ಯತ್ರತ್ರಯಂ ಗಸ್ತ್ಯರಭಾತ್ರರಪ್ಪ ತ್ರಕ್ಕಳಿತ ಸೋಗದಪಾಗ ಗಂಭೀರ ಮಟಂ ನೈಷ್ಠಿಕಸಾನವಾರಿಗಳ ಅದಿರೆ ಸಲ್ಲ ಇನ್ತೀ ಧರ್ಮಮಂ ಪ್ರತಿಪಾಳಿಸುವರ್ ಗಾವುಣ್ಡಗಳುಂ ಬಳಂಜವಯ್ನೂರ್ವರುಂ ನಕರಮುಂ ಕಾಜಗಾಱಸೆಟ್ಟಿಯರುಂ ನಡೆಯಿಸುವರ್" ಎಂದು ಉಲ್ಲೇಖವನ್ನೊಳಗೊಂಡಿದೆ. ಈ ಶಾಸನದ ಆಧಾರದ ಮೇಲೆ ಕಾಳಾಮುಖ ಮಹಾವ್ರತ, ಪಾಶುಪತ, ಶಿವಸಮಯ ಈ ನಾಲ್ಕು ಶೈವ ಶಾಖೆಗಳು ಅಸ್ತಿತ್ವದಲ್ಲಿದ್ದವೆಂದೂ, "ಸಮಾನ ಪಕ್ಷಪಾತರ್" ಎಂಬ ದಾಖಲೆಯು ಇವು ಒಂದೇ ಮೂಲದ ಶಾಖೆಗಳೆಂದೂ ಸ್ಪಷ್ಟವಾಗುತ್ತದೆ.

ಕ್ರಿ.ಶ. 1119ರ ನೇಸರಗಿ ಮತ್ತು ಕ್ರಿ.ಶ. 1148ರ ಶಿರಸಂಗಿ ಶಾಸನದಲ್ಲಿ ಕಂಡುಬರುವ ಕಂದ ಪದ್ಯದಲ್ಲಿ ನಾಲ್ಕು ಶೈವಗಳ ಉಲ್ಲೇಖವಿರುವ ಪದ್ಯ ಹೀಗಿದೆ. "ನೆಗರ್ದ ಮಹಾವ್ರತಿಗಳೊಳಂ । ನೆಗರ್ದ ಮಹಾಪಾಸುಪತದೊಳ್ ಸ್ರೋತ್ರೀಯದೊಳಂ । ನೆಗರ್ದ ದಗಣಿತಮೆನಲ್ಕೆ । ನೆಗರ್ದ ಕಾಳಾಮುಖಸುಧರ್ಮಂ ಪ್ರಮುಖ" **(ಕರ್ನಾಟಕ ಇನ್‌ಸ್ಕ್ರಿಪ್‌ಶನ್ಸ್ ಸಂ.I, ನಂ.24)** ಅಂದರೆ ಈ ಶಾಸನದ ಮೂಲಕ ಮಹಾವ್ರತ, ಪಾಶುಪತ, ಶ್ರೋತ್ರೀಯ, ಕಾಳಾಮುಖವೆಂಬ ನಾಲ್ಕು ಶಾಖೆಗಳನ್ನು ಸೂಚಿಸಿದೆ. ಇವುಗಳಲ್ಲಿ ಶ್ರೋತ್ರೀಯ ಹೆಚ್ಚು ವೇದ ನಿಷ್ಠವಾಗಿರಬಹುದು. ಮಹಾವ್ರತಿ (ಕಾಪಾಳಿ), ಪಾಶುಪತ, ಸ್ತೋತ್ರಿ (ಶೈವ), ಕಾಳಾಮುಖ (ಲಾಕುಳ>ನಕುಲೀಶ) ಎಂದು ಮೇಲೆ ಉಲ್ಲೇಖಿಸಿದ ನಾಲ್ಕು ಶೈವಗಳನ್ನೇ ಪ್ರಸ್ತಾಪಿಸುತ್ತ ಇವುಗಳಲ್ಲಿ ಕಾಳಾಮುಖವು ಶ್ರೇಷ್ಠವೆಂದು ಹೇಳುತ್ತದೆ. ಇವೆಲ್ಲವುಗಳನ್ನು ಸಮೀಕರಿಸಿದರೆ ನಕುಲೀಶ (ಲಾಕುಳ>ಕಾಳಾಮುಖ), ಪಾಶುಪತ, ಶೈವಸಿದ್ಧಾಂತ, ಮಾಹೇಶ್ವರ (ಶ್ರೋತ್ರಿ), ಮಹಾವ್ರತಿ (ಕಾಪಾಳಿಕ) ಈ ನಾಲ್ಕು ಶೈವಧರ್ಮಗಳು ಕರ್ನಾಟಕದಲ್ಲಿ ಹರಡಿಕೊಂಡಿದ್ದವೆಂದು ತಿಳಿಯುತ್ತದೆ. **(ಕಲಬುರ್ಗಿ ಎಂ.ಎಂ., ಮಾರ್ಗ–4, ಪು.284)**

ಶ್ರವಣಬೆಳಗೊಳದ **(EC.II. P–42–54, No. 77 (67); ಕೆ.ಪಿ.ಈರಣ್ಣ: ಪಾಶುಪತರ ಶಾಸನಗಳು.** ನಂ. **75)** ಕ್ರಿ.ಶ. 1129ರ ಶಾಸನವು "ಶೈವಾನ್‌ಪಾಶುಪತಾಂಸ್ತಥಾಗತಸುತಾನ್ ಕಾಪಾಲಿಕಾನ್" ಎಂದು ಹೇಳುವುದರ ಮೂಲಕ ಶೈವಧರ್ಮದಲ್ಲಿ ಶೈವ ಪಾಶುಪತ ಮತ್ತು ಕಾಪಾಲಿಕ ಎಂಬ ಮೂರು ಶಾಖೆಗಳಿದ್ದವೆಂಬುದನ್ನು ತಿಳಿಸಿದೆ. ಕುರುಬೆಟ್ಟದ (ಎ.ಇಂ. **1928)** ಕ್ರಿ.ಶ. 1245ರ ಶಾಸನವು ಶೈವಶಾಖೆಗಳಾದ ನಕುಲೀಶ, ಪಾಶುಪತ, ಕಾಪಾಲಿಕ ಶೈವಗಳನ್ನು ಪ್ರಸ್ತುತಪಡಿಸುತ್ತದೆ.

ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖವಿರುವ ಬೇರೆ ಬೇರೆ ಪ್ರಭೇಧಗಳ ಕುರಿತಾಗಿ ತಿಳಿಸಿರುವಂತೆ ಈ ಮೇಲಿನ ಶಾಸನಗಳನ್ನು ಅವಲೋಕನ ಮಾಡಿದರೆ ಪಾಶುಪತ, ಕಾಳಾಮುಖ, ಕಾಪಾಲಿಕ ಮತ್ತು ಶುದ್ಧಶೈವ ಎಂಬ ನಾಲ್ಕು ಪ್ರಭೇಧಗಳನ್ನು ಶಾಸನಗಳು ಹೆಚ್ಚಾಗಿ ಪ್ರಸ್ತಾಪಿಸಿರುವುದರಿಂದ ಇವುಗಳನ್ನು ಮುಂದೆ ಚರ್ಚಿಸಲಾಗಿದೆ. ಇವುಗಳಲ್ಲದೇ ಒಂಬತ್ತನೆಯ ಶತಮಾನದ ಕಾಲದಲ್ಲಿ



Scanned with OKEN Scanner

ಶೈವಧರ್ಮದಲ್ಲಿ ತಮಿಳುಶೈವ, ಕಾಶ್ಮೀರಶೈವ, ವೀರಶೈವ ಹೀಗೆ ಬೇರೆ ಬೇರೆ ಪ್ರಬೇಧಗಳು ಹುಟ್ಟಿಕೊಂಡು ಬಂದಿದ್ದರೂ ಕೂಡಾ ಪ್ರಸ್ತುತ ಲೇಖನಕ್ಕೆ ಸೀಮಿತವಾಗಿರುವ ಕ್ರಿ.ಶ. 757 ರಿಂದ 1336ರ ವರೆಗಿನ ಕಾಲಾವಧಿಯ ಶಾಸನಗಳಲ್ಲಿ ಇವುಗಳು ಅಷ್ಟಾಗಿ ಬೆಳಕು ಬೀರುವುದಿಲ್ಲ. ಈ ಪ್ರಬೇಧಗಳಲ್ಲಿ ಒಂದಾದ ಕಾಳಾಮುಖ ಮುನಿಗಳು ಮಹಾನ್ ವಾಗ್ಮಿಗಳಾಗಿದ್ದು ಕರ್ನಾಟಕದ ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಗಳನ್ನು ನೀಡಿದೆ.

ಕಾಳಾಮುಖ ಎಂದರೇನು ಎಂಬ ಪದದ ಅರ್ಥವಿಶ್ಲೇಷಣೆ ಮಾಡುವುದು ತುಂಬಾ ಕಷ್ಟವಾಗಿದ್ದರೂ ಕೆಲವು ಆಧಾರಗಳ ಮೂಲಕ ಸಾಕಿ ಅವರು ಬರೆದ 'Making History' ಎಂಬ ಕೃತಿಯಲ್ಲಿ ಹಣ ಸುಟ್ಟಿರುವ ಭೂದಿಯಿಂದ ಮುಖವನ್ನು ಕಪ್ಪು ಮಾಡಿಕೊಂಡು ಶಿವನನ್ನು ಆರಾಧಿಸುವವರೇ ಕಾಳಾಮುಖ ಶೈವರೆಂದು ಉಲ್ಲೇಖಿಸಿದ್ದಾರೆ. ಕಾಳಾಮುಖ ಎಂಬ ಶಬ್ದವು 'ಕಲಾ' ಶಬ್ದದಿಂದ ರೂಪಾಂತರಗೊಂಡಿರುವ ಪದ. ಇದು ಕಲಾ, ಕಾಳಾ, ಕಾಳಾಮುಖ ಶಿವನ ಐದು ಮುಖದಿಂದ ಪಂಚ ಕಲೆಗಳು, ಈ ಪಂಚಕಲೆಗಳನ್ನು ಯಾರು ಅನುಸರಿಸಿಕೊಂಡು ಶಿವನನ್ನು ಆರಾಧಿಸುವರೋ ಅವರೇ ಕಾಳಾಮುಖರು. ಈ ಹಿನ್ನೆಲೆಯಲ್ಲಿ ಶಿವನ ಪಂಚ ಮುಖಗಳಿರುವ ಮುಖಲಿಂಗ ವಿಗ್ರಹವು ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಬಳಿಯಿರುವ ವಿಷ್ಣು ಪುಷ್ಕರಣಿಯಲ್ಲಿ ಕಾಣಸಿಗುವುದು.

ವಾಯುಪುರಾಣವು ಹೇಳುವಂತೆ ನಂದಿಯು ತನ್ನೊಡೆಯನಾದ ಶಿವನ ದರುಶನಕ್ಕಾಗಿ ಬಂದವರ ಕುರಿತಾದ ಮಾಹಿತಿಯನ್ನು ಶಿವನಿಗೆ ಹೇಳುವ ಸಂದರ್ಭದಲ್ಲಿ ಕೈಯಲ್ಲಿ ಪಿನಾಕ ಧನಸ್ಸನ್ನು ಹಿಡಿದ, ಜಟಾಕೇಶವನ್ನು ಧರಿಸಿದ, ನಿನಗೆ ಸಮರ್ಪಿಸಿಕೊಂಡಿರುವ ಭಯಂಕರರೂ, ವಿಚಿತ್ರರೂ ಆದ ಕಾಳಾಮುಖರು ಬಂದಿದ್ದಾರೆ ಎಂದು ಹೇಳುತ್ತಾನೆ. (**ಗೋಗಿ ಹನುಮಾಕ್ಷಿ (ಅನು) (2007); ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು; ಪುಟ–61**) ಅದೇ ಪುರಾಣವು ಮುಂದುವರೆದು ಕಾಲದವನ ಎಂಬ ದಾಖಲೆಯಿದ್ದು, ಬಹುಷಃ ಇದನ್ನು ಕಾಳಾಮುಖರಿಗೆ ಹೇಳಿದ್ದಿರಬೇಕು ಎಂದು ಕಪಟರಾಳ ಕೃಷ್ಣರಾಯರು ತಮ್ಮ ವಿಚಾರವನ್ನು ವ್ಯಕ್ತಪಡಿಸಿದ್ದಾರೆ.

ಸ್ಕಂದಪುರಾಣದ ಭಾಗವಾಗಿರುವ ಪಂಪಾಮಹಾತ್ಮೆ ಈ ವಿಷಯದ ಪ್ರಸ್ತಾಪ ಮಾಡಿದೆ. ಹಂಪೆಯ ಸ್ಥಳಪುರಾಣವನ್ನು ಚರ್ಚಿಸುವ ಸಂದರ್ಭದಲ್ಲಿ ಮಹಾಕಾಳನೆಂಬ ಶಿವಗಣನಿಗೆ ಶಿವನು ಕಾಳಾಮುಖ ಮಂತ್ರವನ್ನು ಉಪದೇಶಿಸಿದನು. ಆತನಿಂದ ಸುರರಿಗೆ, ಸುರರಿಂದ ಮುನಿಗಳಿಗೆ, ಮುನಿಗಳಿಂದ ಕಾಳಾಮುಖ ಮತವು ಭೂಲೋಕವನ್ನು ಪ್ರವೇಶಿಸಿತು. ಇಲ್ಲಿ ಮಹಾಕಾಳನು ಪರಶಿವನ ಆಶೀರ್ವಾದದಿಂದ ಕಾಳಾಮುಖ ಮಂತ್ರದೊಂದಿಗೆ, ಕಾಳಾಮುಖ ಸಂಪ್ರದಾಯವನ್ನು ಪ್ರಾರಂಭಿಸಿದನೆಂಬ ತಿಳಿಸುತ್ತದೆ. ಇದರಿಂದ ಶಿವನ ಅನುಯಾಯಿಯಾದ ಮಹಾಕಾಲ ಭೂಮಿಗೆ ಬಂದು ಕಾಳಾಮುಖ ಮತ ಪ್ರಸಾರ ಮಾಡಿದ್ದಕ್ಕೆ ಕ್ರಿ.ಶ. 1014ರ ಗೋನಹಾಳ (**ಕನ್ನಡ ವಿಶ್ವವಿದ್ಯಾಲಯ ಶಾಸನ, ಸಂಪುಟ 1, ಹೊಸಪೇಟೆ ನಂ.40**) ಶಾಸನ ಪೂರಕವಾದ ಮಾಹಿತಿಯನ್ನು ನೀಡುತ್ತದೆ. ಇದರಲ್ಲಿ "ಪಂಪಾತೀರ್ಥದ ಮಹಾಕಾಳ" ದೇವರಿಗೆ ಭೂದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನಗಳನ್ನು ಗಮನಿಸಿದರೆ ಕಾಳಾಮುಖ ಸಂಪ್ರದಾಯವು ಆರಂಭಗೊಂಡಿರುವುದು ಪಂಪಾಕ್ಷೇತ್ರದಿಂದಲೇ ಎಂಬುದು ತಿಳಿಯುತ್ತದೆ. ಪಂಪಮಹಾತ್ಮೆಯು ಅರ್ಥೈಸುವಂತೆ

**ಕಲಾಮುಖೈಕ ಸಂಬಂಧೀ ಯತ್ಕಾಲಾಮುಖಂ ಮತಂ ।**

**ತದನುಷ್ಠಾನುವಂತೋ ಯೇ ತೇಪಿ ಕಾಲಾಮುಖಾಃ ಸ್ಮೃತಾಃ ॥**

ಶಿವನಿಗೆ ನವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯಾತೀತ ಎಂಬ ಐದು ಕಲೆಗಳಿವೆ. ಈ ಐದು ಕಲೆಯನ್ನು ಪ್ರತಿನಿಧಿಸುವ ಈಶಾನ, ವಾಮದೇವ, ಸದ್ಯೋಜಾತ, ಅಘೋರ, ತತ್ಪುರುಷ ಮುಖಗಳೇ ಕಲಾಮುಖಗಳು. ಈ ಕಲಾಮುಖಗಳಿಗೆ ಸಂಬಂಧಿಸಿದುದೇ ಕಾಳಾಮುಖ ಹಾಗೂ ಪಂಚಕಲೆಗಳನ್ನು ಉಪಾಸನೆ ಮಾಡುವವರೇ ಕಾಳಾಮುಖರಾಗಿದ್ದಾರೆ (**ಈರಣ್ಣ ಕೆ.ಪಿ. (2012); ಕಾಳಾಮುಖ ಕುರಿತಾಗಿರುವ ಅಧ್ಯಯನಗಳು; ಪುಟ–02**) ಯಾರು ಪಂಚಕಲೆಗಳನ್ನು ಕರಗತ ಮಾಡಿಕೊಂಡಿರುವನೋ, ತತ್ವಗಳನ್ನು ಅರಿತುಕೊಂಡಿರುವನೋ ಆತನು ಕಾಳಾಮುಖ ತತ್ವವನ್ನು ತಿಳಿದವನು. ಅವನು ಕಾಳಾಮುಖ ಪರಂಪರೆಯ ಗುರುವಾಗಿರುವನು. ಈ ಗುರುವು ಯಾವಾಗಲೂ ಕಾಳಾಮುಖ ಪರಂಪರೆಯಲ್ಲಿರುವ ಬ್ರಹ್ಮಚರ್ಯ, ದಯೆ, ಸತ್ಯ, ಅಕ್ರೋದ, ಶಾಂತಿ, ಅರ್ಜವ, ತಪಸ್ಸು, ಶಿವಭಕ್ತಿ, ಗುರುಭಕ್ತಿ, ಜಪ ಎಂಬ 10 ಅಂಗಗಳನ್ನು ಅರಿತುಕೊಂಡು ಆಚರಿಸುತ್ತಿರಬೇಕು. ಇದರಿಂದ ಕಾಳಾಮುಖರು ಯಾರು ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ಕಾಳಾಮುಖವೆಂಬುದು ಒಂದು ವ್ರತಾಚರಣೆ, ಒಂದು ಕಲೆ, ಒಂದು ಮಂತ್ರ, ಈ ರೀತಿಯಾಗಿ ಪಂಪಾಮಹಾತ್ಮೆಯಲ್ಲಿ ಚರ್ಚಿಸಲಾಗಿದೆ.



Scanned with OKEN Scanner

ಶ್ರೀ ಗುರು ಓಂ ಸಿದ್ಧಲಿಂಗೇಶ್ವರ ಸ್ವಾಮಿಗಳು ಪ್ರಕಟಿಸಿರುವ "ಶ್ರೀ ಪಂಪಾ ಮಹಾತ್ಮೆ" ಎಂಬ ಕೃತಿಯ ಉತ್ತರ ಭಾಗದಲ್ಲಿರುವ ಅಧ್ಯಾಯವು 'ಕಾಳಾಮುಖ ಮತ ಪ್ರಶಂಸೆ' ಎಂಬುವುದರಲ್ಲಿ ಕಾಳಾಮುಖರ ಉಗಮವನ್ನು ಕುರಿತು ಹೀಗೆ ಬರೆಯುತ್ತಾರೆ' **(ಅದೇ ಪುಟ 753–756)** ". . . . . ಕಾಳಾಮುಖರ ಮತವನ್ನು ತಿಳಿಯಬೇಕೆಂಬ ಮಹತ್ಕುತೂಹಲವು ನನಗುಂಟಾಗಿದೆ. ಸರ್ವಾಗಮಗಳಲ್ಲಿ, ಸರ್ವತಂತ್ರಗಳಲ್ಲಿ, ಸರ್ವಚರಿತಗಳಲ್ಲಿ, ಸರ್ವಸಂಹಿತೆಗಳಲ್ಲಿ, ಮಹತ್ಪುರಾಣಗಳಲ್ಲಿ, ಸರ್ವೇತಿಹಾಗಳಲ್ಲಿ, ರಹಸ್ಯೋಕ್ತಿಗಳಲ್ಲಿ ಶಿವನೇ ಸರ್ವ ಶ್ರೇಷ್ಠ ದೇವನೆಂದು, ಶಿವಾಪಂಚಾಕ್ಷರೀ ಮಂತ್ರವೇ ಸರ್ವ ಶ್ರೇಷ್ಠ ಮಂತ್ರವೆಂದು ಹೊಗಳಲ್ಪಟ್ಟಿರುವುದು. ಯಾವಾಗಲೂ ಕಲೆಯೇ ಮುಖ್ಯವಾದುದಾದ ಕಾರಣ ಕಾಳಾಮುಖವು ಮಹಾಮತವೆಂದೂ ಹೇಳಲ್ಪಟ್ಟಿರುವುದು. ಈ ಮತವು ಎಲ್ಲಾ ಕಡೆಗಳಲ್ಲಿ ಪಸರಿಸಲಿ ಎಂಬ ಉದ್ದೇಶದಿಂದ ಶಿವನು ಈ ಮತವನ್ನು ಆರಂಭಿಸಿದನು. ನನಗೆ ಕಾಳಾಮುಖ ತಂತ್ರವನ್ನು ಸವಿಸ್ತಾರವಾಗಿ ತಿಳಿಸು ಎಂದು ವಿಷ್ಣುವೃದ್ದನು ಭಾರಧ್ವಾಜನನ್ನು ಪ್ರಾರ್ಥಿಸಿದನು. ಕಾಳಮುಖ ಪರಂಪರೆ ಇಂದು ಧಾರ್ಮಿಕ ವಲಯದಿಂದ ಮರೆಯಾಗಿದ್ದರೂ ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಕೊಟ್ಟಿರುವ ಕೊಡುಗೆಗಳು ಎಂದಿಗೂ ಮರೆಯಲಾರದೆ ಉಳಿದುಕೊಂಡಿವೆ. ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆಗಳು ಅವಿಸ್ಮರಣೀಯ.

**ಶಿಕ್ಷಣ :**

ಆಧುನಿಕ ಶಿಕ್ಷಣ ಪದ್ಧತಿಯ ಹಳೆಯ ಬೇರುಗಳು ಗುರುಕುಲ ಪರಂಪರೆಯ ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಳವಾಗಿ ಇಳಿದುಕೊಂಡಿವೆ. ಅಂದು ಸರ್ವರಿಗೂ ಶಿಕ್ಷಣ ದೊರೆಯುವುದು ಕಷ್ಟವಾಗಿತ್ತು ಬ್ರಾಹ್ಮಣರು ನಡೆಸುತ್ತಿರುವ ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಕಾಸ್ಥಾನಗಳು ಅರಸು ಮನೆತನದವರು, ಬ್ರಾಹ್ಮಣವರ್ಗದವರಿಗೆ ಮಾತ್ರ ಸೀಮಿತವಾಗಿದ್ದವು. 6ನೇ ಶತಮಾನದಲ್ಲಿ ಉದಯವಾದ ಜೈನ ಮತ್ತು ಬೌದ್ಧಮತಗಳು ಸರ್ವರಿಗೂ ಸಮಾನ ಶೈಕ್ಷಣಿಕ ಸೌಲಭ್ಯವನ್ನು ನೀಡುವ ಪರಿಕಲ್ಪನೆಯನ್ನು ಆರಂಭಿಸಿದರು. ತಮ್ಮ ಮತದ ದರ್ಶನವನ್ನು ಸ್ಥಳೀಯ ಭಾಷೆಗಳ ಮೂಲಕ ಪ್ರಚಾರ ಮಾಡುತ್ತಾ ಶೈಕ್ಷಣಿಕ ಕ್ಷೇತ್ರವನ್ನು ಬೆಳೆಸಲಾರಂಭಿಸಿದರು. ಆದರೆ ವೈದಿಕ ಶಿಕ್ಷಣದ ಜನರಾಡುವ ಭಾಷೆಯಲ್ಲಿರದೆ ಸಂಸ್ಕೃತ ಭಾಷೆಯಲ್ಲಿ ನಡೆಯುತ್ತಿತ್ತು. ಇಂಥ ಸಂದರ್ಭದಲ್ಲಿ ಬೆಳೆಯುವ ಹಂತದಲ್ಲಿದ್ದ ಕಾಳಾಮುಖ ಪರಂಪರೆಯ ಮುನಿಗಳು ಸ್ಥಳೀಯ ಮತ್ತು ಜನರಾಡುವ ಭಾಷೆಯಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಶಿಕ್ಷಣ ನೀಡುವ ಪ್ರಯತ್ನವನ್ನು ತಮ್ಮ ಮಠಗಳ ಮೂಲಕ ಮಾಡಲಾರಂಭಿಸಿದರು. ಇದು ಕರ್ನಾಟಕದ ಧಾರ್ಮಿಕ ಮತ್ತು ಶೈಕ್ಷಣಿಕ ರಂಗದಲ್ಲಿ ಮಹತ್ತರ ಬದಲಾವಣೆಗೆ ಪ್ರೇರಣೆಯಾಯಿತು.

ಮಠಗಳ ಮೂಲದ ಕುರಿತು ಸ್ಪಷ್ಟವಾಗಿ ಹೇಳುವುದು ಕಠಿಣವಾದರೂ ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ಮಠಗಳು ಆಧುನಿಕ ಮಾದರಿಯ ಮಠಗಳಿಗೆ ಬುನಾದಿಯನ್ನು ಹಾಕಿದ್ದವು. ಶೈವಮಠಗಳು 7ನೇ ಶತಮಾನದಲ್ಲಿಯೇ ಕರ್ನಾಟಕದಲ್ಲಿ ಕಂಡುಬರುತ್ತಿದ್ದವು ಎಂಬುದನ್ನು ಶಾಸನಗಳು ಹೇಳುತ್ತವೆ. **(ಕಪಟರಾಳ ಕೃಷ್ಣರಾಯರು, ಕರ್ನಾಟಕ ಲಾಕುಳ ಶೈವರ ಇತಿಹಾಸ ಪುಟ–100)** ಈ ಮಠಗಳು 14ನೆಯ ಶತಮಾನದವರೆಗೆ ಕಾಳಾಮುಖ ಸ್ಥಾನಾಚಾರ್ಯರ ಅಧೀನದಲ್ಲಿದ್ದು; ಕಾಲಾಂತರದಲ್ಲಿ ಈ ಮಠಗಳಲ್ಲಿದ್ದ ಕಾಳಾಮುಖ ಆಚಾರ್ಯರ ಪ್ರಭಾವ ಕಡಿಮೆಯಾಗುತ್ತಾ ಸಾಗಿದಾಗ ಅವುಗಳು ವೀರಶೈವ ಮಠಗಳಾಗಿ ಪರಿವರ್ತಿತವಾಗಿರುವುದು ತಿಳಿದುಬರುತ್ತದೆ. (ಉದಾಹರಣೆಗೆ ಹೂಲಿಯ ಮಠ)

ಕಾಳಾಮುಖ ಮಠಗಳು ಅಲ್ಲಿರುವ ಸ್ಥಾನಪತಿಗಳ ಪಾಂಡಿತ್ಯ ಮತ್ತು ವ್ಯಕ್ತಿತ್ವದ ಪ್ರಭಾವದಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಾ ಅವರಿಗೆ ಶಿಕ್ಷಣ ನೀಡುತ್ತಾ ಮಠಗಳಲ್ಲಿ ಆಹಾರ, ಔಷಧ ಮತ್ತು ವಸತಿ ಸೌಲಭ್ಯದ ವ್ಯವಸ್ಥೆಯನ್ನು ಕಲ್ಪಿಸಿದವು. ಇಂತಹ ಕಾಳಾಮುಖ ಮಠಗಳಿಗೆ ಅರಸರು, ಸಾಮಂತರು, ಅಧಿಕಾರಿ ವರ್ಗದವರು, ಆಡಳಿತಗಾರರು ಹಾಗೂ ಸಾಮಾನ್ಯರು. ಮಹಿಳೆಯರು ಅಲ್ಲಿಯ ಸ್ಥಾನಾಚಾರ್ಯರ ಕಾಲು ತೊಳೆದು (ಕಾಲಂಕರ್ಚಿ) ಗ್ರಾಮ, ಭೂಮಿ, ಹಣ, ಆಹಾರಧಾನ್ಯ ಮತ್ತು ತೆರಿಗೆಯ ಆಧಾಯ ಮುಂತಾದ ದಾನ ನೀಡಿದ್ದನ್ನು ಹಲವಾರು ಕನ್ನಡ ಹಾಗೂ ಸಂಸ್ಕೃತ ಶಾಸನಗಳ ಹೇಳಿವೆ. ಮಠಗಳಲ್ಲಿದ್ದ ಸ್ಥಾನಾಚಾರ್ಯರು ರಾಜಗುರುಗಳಾಗಿಯೂ ಆಡಳಿತಾತ್ಮಕ ಕಾರ್ಯಗಳನ್ನು ನಿಭಾಯಿಸುತ್ತಿದ್ದರೆಂದು ಹಲವಾರು ಶಾಸನಗಳು ಹೇಳುತ್ತವೆ.

ಕ್ರಿ.ಶ. 1252ರ ಮುನವಳ್ಳಿಯ ಶಾಸನವು **(ಕೆ.ಆಯ್.ಸಂ.1.ನಂ.31)** ಜಗದೀಶ್ವರ ದೇವಾಲಯಕ್ಕೆ ರಾಯರಾಜಗುರು ಸರ್ವೇಶ್ವರದೇವರಂದು ತಿಳಿಸುತ್ತದೆ. ಸರ್ವೇಶ್ವರಮುನಿಯು "ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೋನಾನುಷ್ಠಾನ ಜಪತಪಸಮಾಧಿ ಶಿಲಗುಸಂಪಂನರುಂ ಯಜನ ಯಾಜನ ಅಧ್ಯಯನ ಸಾಧ್ಯಾಯ ಅಧ್ಯಾಪನ ಪ್ರತಿಗ್ರಹ ಷಟ್ಕರ್ಮನಿಯತರುಂ ಋಗ್ವೇದ ಸಾಮವೇದ ಅಥರ್ವಣ ಯಜರ್ವೇದ ವೇದಾಂತ ತರ್ಕ ವ್ಯಾಕರಣ ಛಂದಸ್ಸು ನಿಘಂಟು ಕಾವ್ಯ, ನಾಟಕ ಸರಳ



Scanned with OKEN Scanner

ವಿದ್ಯಾ ವಿನೋದರಾಗಿದ್ದು; ಬ್ಯಾಸ ಅಗಸ್ತ್ಯ ದೂರ್ಬ್ವಾಸ ವಿಶ್ವಾಮಿತ್ರರಂತಹ ದಿವ್ಯ ಮುನಿಗಳ ಭಸ್ಮೋಧ್ಧೂಳಿತ ಗಾತ್ರರುಂ ಕುಪಿನಾಂಜನರುಂ ಉಭಯಕುಲ ಸುದ್ದಮಪ್ಪ ಶ್ರೀಕಾಳಾಮುಖಮಸಿಯ ಸಂಮಂಧ ಶ್ರೀಮತು ರಾಜಗುರು ಸರ್ವೇಶ್ವರದೇವರು" ಎಂದು ಅವರ ಪಾಂಡಿತ್ಯವನ್ನು ವರ್ಣಿಸುತ್ತದೆ.

ಶಕ್ತಿ ಪರ್ಷೆಗೆ ಪ್ರಧಾನ ಕೇಂದ್ರವಾಗಿದ್ದ ಬಳ್ಳಿಗಾವಿಯ **(ಇಸಿ.07.ಶಿಕಾರಿಪುರ.ನಂ.92 ಮತ್ತು 105)** ಕ್ರಿ.ಶ. 1192 ರ ಶಾಸನವು ಕೇದಾರೇಶ್ವರ ಮಠದ ಸ್ಥಾನಾಚಾರ್ಯ ಎರಡನೆಯ ವಾಮಶಕ್ತಿ ರಾಜಗುರು ವರ್ಣಿತನಾಗಿದ್ದನಲ್ಲದೇ ಈತನು 46 ವರ್ಷಗಳ ಕಾಲ ಈ ಮಠದ ಸ್ಥಾನಾಚಾರ್ಯನ ಜವಾಬ್ದಾರಿಯನ್ನು ನಿಭಾಯಿಸುವುದರ ಮೂಲಕ ಈ ಮಠದ ಕೀರ್ತಿ ಪತಾಕೆಯನ್ನು ನಾಡಿನ ಉದ್ದಗಲಕ್ಕೂ ವ್ಯಾಪಿಸುವಂತೆ ಮಾಡಿದ್ದನು. ಈತನು ವೇದಶಾಸ್ತ್ರ, ತರ್ಕ, ಕಾವ್ಯ ನಾಟಕಾದಿಗಳಲ್ಲಿ ಪ್ರಕಾಂಡ ಪಂಡಿತನಾಗಿದ್ದಲ್ಲದೆ ವಿಶಿಷ್ಟ ನಾನಾಮಂತ್ರ ಸಾಧಕನೂ ಆಗಿದ್ದಂತೆ ತಿಳಿಸುತ್ತದೆ. ಇಂತಹ ಹಲವಾರು ಉದಾಹರಣೆಗಳು ಅನೇಕ ಶಾಸನಗಳಲ್ಲಿವೆ. ಈ ಮಠದಲ್ಲಿ ನೆಲೆಸಿದ ಸ್ಥಾನಪತಿಗಳು ಕೇವಲ ವಿದ್ವಾಂಸರುಗಳಾಗಿದ್ದಲ್ಲದೆ ನೈಷ್ಠಿಕ ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಬರುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಒಂದು ವೇಳೆ ಈ ನಿಯಮಕ್ಕೆ ತಪ್ಪಿನಡೆದರೆ ಅಂತಹ ಮುನಿಗಳನ್ನು ಮಠದಿಂದಲೇ ಹೊರ ಹಾಕಲಾಗುತ್ತಿತ್ತು. ಕೇದಾರೇಶ್ವರ ಮಠದ ಗುರುಪರಂಪರೆಯಲ್ಲಿ ಪ್ರಸಿದ್ಧವಾದ ಗುರು ವಾಮಶಕ್ತಿ. ಕ್ರಿ.ಶ. 1168ರ **(ಇ.ಅ. VII SK 92)** ಶಾಸನವೊಂದು ಹೀಗೆ ಹೊಗಳಿದೆ.

**'ಶಬ್ದೇಪಾಣಿನಿ ಪಂಡಿತೋನಯಚಯೇಶೀ ಭೂಷಣಾಚಾರ್ಯ್ಯರ**
**ನಾಟ್ಯಾಚಾ ಭರತೇ ಮುನಿಶ್ಚ ಭರತಃ ಕಾವ್ಯೇ ಸುಬಂಧುಃ ಸ್ವಯಃ**
**ಸಿದ್ಧಾನ್ತೇ ಲಕುಳೀಶ್ವರಃ ಶಿವಪದೇ ಸ್ಕಂದೋಮಹೀ**
**ಮಂಡಳೇ ಸೋಯಂ ರಾಜಗುರುರ್ಯ್ಯಥಾರ್ತ್ಥ ಕದಿತಃ ಶ್ರೀವಾಮಶಕ್ತಿರ್ಯ್ಯತಃ**

ಹೀಗೆ ರಾಜಗುರುವಿನ ಸ್ಥಾನವನ್ನು ಅಲಂಕರಿಸಿದ ಕಾಳಾಮುಖ ಗುರುಗಳ ರಾಜನ ನೀತಿ ನಿರ್ವಹಣೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸತೊಡಗಿದರು. ಹೀಗಾಗಿ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿದ್ದ ದಾನದತ್ತಿಗಳು ಶೈವ ಗುರುಗಳಿಗೆ ದೊರೆಯಲಾರಂಭಿಸಿದವು.

ಶಿಗ್ಗಾಂವಿಯ **(ಕೆ.ಆಯ್.ಸಂ.1.ನಂ.13)** ಶಾಸನವು ಈ ಸ್ಥಾನಮಾಳ್ವಗೊರವರ್ ಅಖಂಡಿತ ಬ್ರಹ್ಮಚಾರಿಯಪ್ಪುದು. ಬ್ರಹ್ಮಚರ್ಯ ಹೀನರಿನೀ ಸಮಯದ ಗೊರವರ್ ಕಳೆವರ್ ಈ ಪದ್ಧತಿಯಂ ಶಿಲಾಲೇಖೆ ಮಾಡಿ ನಿರಿಸಿದರ್. ಅದೇ ಗ್ರಾಮದ ಮತ್ತೊಂದು **(ಕೆ.ಆಯ್.ಸಂ.1.ನಂ.17)** ಕ್ರಿ.ಶ. 1055ರ ಶಾಸನದಲ್ಲಿ ಜಪಸಮಾಧಿ ಸಂಪನ್ನರಪ್ಪ ಶ್ರೀಮತ್ ಸೋಮೇಶ್ವರ ಪಂಡಿತದೇವರ್ಗ್ಗೆ ಕಾಲಂಕರ್ಚ್ಚಿ ನೈಷ್ಠಿಕ ಸ್ಥಾನಮಾಡಿ ಪಳ್ಳವುರ ಗ್ರಾಮವನ್ನು ತಳವೃತ್ತಿಯಾಗಿ ಬಿಟ್ಟರು.

ಕ್ರಿ.ಶ. 1070ರ ಉಚ್ಚಂಗಿದುರ್ಗದ ಶಾಸನದಲ್ಲಿ ನನ್ನೇಶ್ವರದ ಆಚಾರ್ಯ ಕಾಳಾಮುಖ ತಪೋಧನ, ಸಕಳ ಕಳಾರಕ್ಷಾ ಪ್ರವೀಣ, ಅತ್ರೇಯ ಗೋತ್ರ ಪವಿತ್ರ 14 ಪ್ರಮಾಣಸಿದ್ದಾಂತ ವ್ಯಾಖ್ಯಾನಕಾರ, ತಾರ್ಕಿಕ ಚರ್ಕವರ್ತಿ ಕಂಟೆಯ ವಖ್ಯಾಣದೇವ ಈತನ ಶಿಷ್ಯ ಗುರುಕುಲ ಸಮುದ್ಧರಣ, ಅತ್ರೇಯ ಗೋತ್ರದ ಉಚ್ಚಂಗಿಕೋಟೆಯ ಸೋಮೇಶ್ವರ ಪಂಡಿತ ಎಂದು ಉಲ್ಲೇಖಿಸಿದೆ. **(ಕಾಳಾಮುಖ ದರ್ಶನ, ಪು–58)**

ಬಳ್ಳಾರಿಯ ಜಿಲ್ಲೆಯ ಮೊರಿಗೆರೆಯ **(ಎಸ್.ಆಯ್.ಆಯ್.09, ಭಾಗ 1, ನಂ. 101)** ಕ್ರಿ.ಶ. 1085ರ ಶಾಸನವು ಇದು "ನೈಷ್ಠಿಕಸ್ಥಾನಂ ನೈಷ್ಠಿಕರಲ್ಲದ ತಪೋಧನಮಿರಲಾಗದು. ಬ್ರಹ್ಮಚರ್ಯಯಿಂ ಕೆಟ್ಟು ನಡೆವ ತಪೋಧನರಂ ನಾಡನಾಳ್ವ ಅರಸರುಂ ಮನೆಯರುಂ ಮೋರಿಂಗೆಱೆಯ ಪನ್ನಿರ್ವರೊಡೆಯರುಂ ಇರ್ದುವರಂ ಪೊರಮಡಿಸಿ ಅವರ ಸಂತತಿಯ ನೈಷ್ಠಿಕರನಿರಿಸುವುದು" ಎಂದು ಹೇಳುತ್ತದೆ. ಇನ್ನೊಂದು ಶಾಸನವು "ಆಚಾರಗೆಟ್ಟ ಪೋಗದೆ ಮೊಂಡಿತನಂಗೆಯ್ದು ನಡೆವಂ ಶ್ವಾನ, ಗಾರ್ದಭ ಚಂಡಾಳಂ ಆತಂ ಸತ್ತಡೆ ಪಂಡಿ ಸತ್ತುದು ನಾಯ ಸತ್ತದು ಇದುನು ಪೇಕ್ಷೈಯ್ಯುದ್ವರ್ಗ್ಗೆ ಈ ಧರ್ಮವನಳಿದದೋಷಮಕ್ಕರ" ಎಂದು ಹೇಳಿದ ಈ ಮಾತುಗಳು ಕಾಳಾಮುಖ ಮಠಗಳು ಹೇಗೆ ಕಠಿಣ ಬ್ರಹ್ಮಚರ್ಯತ್ವದ ಸ್ಥಾನಗಳಾಗಿರುವುದರೊಂದಿಗೆ ಶಿಕ್ಷಣವನ್ನೂ ನೀಡುವ ಕೇಂದ್ರಗಳಾಗಿದ್ದವೆಂಬುದು ಸ್ಪಷ್ಟವಾಗುತ್ತದೆ.

ಬ್ರಾಹ್ಮಣರು ಹಾಗೂ ಪುರುಷರಿಗೆ ಮಾತ್ರ ಸೀಮಿತವಾಗಿದ್ದ ಪ್ರಾಚೀನ ಕಾಲದ ಶಿಕ್ಷಣವು ಬ್ರಾಹ್ಮಣೇತರರಿಗೂ ದೊರೆಯುವಂತೆ ಮಾಡಿದ ಶ್ರೇಯಸ್ಸು ಕಾಳಾಮುಖ ಗುರುಗಳಿಗೆ ಮತ್ತು ಮಠಗಳಿಗೆ ಸಲ್ಲುತ್ತದೆ. ಕಾಳಾಮುಖರು ಸ್ತ್ರೀ ಪುರುಷ ಎಂಬ ಬೇಧ–ಬಾವನೆಯನ್ನೂ ದೂರಿಕರಿಸಿದರು. ಜೈನ ಸಂಪ್ರದಾಯದಲ್ಲಿರುವಂತೆ ಕಾಳಾಮುಖರೂ ಸಹ ಸ್ತ್ರೀಯರನ್ನು ಸನ್ಯಾಸಿನಿಯರನ್ನಾಗಿ ಮಾಡಿಕೊಂಡು ಅವರಿಗೆ ದೀಕ್ಷೆ ನೀಡಿರುವುದನ್ನು ಗಮನಿಸಬಹುದು. ಕೆಲವು ಪ್ರದೇಶಗಳಲ್ಲಿಯಂತೂ



Scanned with OKEN Scanner

ಮಠದ ಸ್ವಾಮಿತ್ವಕ್ಕೆ ಬ್ರಹ್ಮಚರ್ಯವು ಅಗತ್ಯ ಎಂಬುದನ್ನು ಕೂಡ ಸಡಿಲುಗೊಳಿಸಲಾಯಿತು. ಶಾಸನಗಳಲ್ಲಿ ಇವೆಲ್ಲವನ್ನು ಪೋಷಿಸುವಂತೆ ಉಲ್ಲೇಖಗಳು ಸಿಗುತ್ತವೆ.

ಕೋಡಿಯ ಮಠದಲ್ಲಿ ಜ್ಞಾನದ ವಿವಿಧ ಶಾಖೆಗಳಿದ್ದು ಬಡವರಿಗೆ ಮನೆ-ಮಠಗಳಿಲ್ಲದವರಿಗೆ ಅನಾಥರಿಗೆ, ಕುಂಟರಿಗೆ, ಕುರುಡರಿಗೆ, ಕಥೆ ಹೇಳುವವರಿಗೆ, ಗಾಯಕರಿಗೆ, ಸ್ತುತಿಗಾರರಿಗೆ, ಬಟ್ಟೆ ಇಲ್ಲದವರಿಗೆ, ಗಾಯಗೊಂಡವರಿಗೆ ಜೈನ ಸನ್ಯಾಸಿಗಳಿಗೆ, ಏಕದಂಡ, ತ್ರಿದಂಡಿ ಹಂಸಪರಮಹಂಸರಿಗೆ ಮತ್ತು ಎಲ್ಲ ದೇಶಗಳಿಂದ ಬಂದ ಭಿಕ್ಷುಗಳಿಗೆ ಉಚಿತವಾಗಿ ಆಹಾರವನ್ನು ಹಂಚುತ್ತಿದ್ದರು. ಇದು ಅನಾಥರಿಗಾಗಿ ಅನಾರೋಗ್ಯದಿಂದ ಬಳಲುತ್ತಿದ್ದವರಿಗೆ ಚಿಕಿತ್ಸೆ ನೀಡುತ್ತಿದ್ದ ತಾಣವೂ ಆಗಿತ್ತು. ಎಲ್ಲ ಜೀವಿಗಳಿಗೂ ಭಯದಿಂದ ಬಿಡುಗಡೆ ಮಾಡುವ ಸುರಕ್ಷಿತ ಸ್ಥಳವು ಇದಾಗಿತ್ತು.

ಹೂಲಿಯ ಕ್ರಿ.ಶ. 1104ರ (**ಎ.ಇ. 18, ಪು. 205, 206 ಮತ್ತು ಜೆ.ಎ.ಎಂ. 22**) ಶಾಸನದಲ್ಲಿ ಜ್ಞಾನಶಕ್ತಿಯು "ಈ ಮಹಿಯೊಳ್ ನೆಗಳ್ದರ್ ವಿದ್ಯಾ ಮಹಿಮೋನ್ನತಿಯೊಳುಗ್ರ ತಪದೊಳ್ ಮುಕ್ತಿ ಶ್ರೀಮುಖಮಣಿಮುಕರರ್ ಕಾಳಾಮುಖರೇನಃ ಪರಾಙ್ಮುಖರ್ ಮುನಿವರ್ಯರ್ ಎಂದು ಅವನ ಪಾಂಡಿತ್ಯವನ್ನು ವರ್ಣಿಸುವುದರ ಜೊತೆಯಲ್ಲಿ ಹೂಲಿ ಪ್ರಾಚೀನ ಒಂದು ಅಗ್ರಹಾರವಾಗಿದ್ದು ಅದು ವೇದಂಗಳ ತಾಯ್ವನೆಯದು ನಾನಾ ತರ್ಕದಿರ್ಕದಾಣಂ ಕೇಳಂತದು ಶಾಸ್ತ್ರಂಗಳ ಕಣಿಯಾಗಿದೆ" ಎಂದು ತಿಳಿಸುತ್ತದೆ.

ಚಾಲುಕ್ಯ ಅಕ್ಕಾದೇವಿ ಮಠವೊಂದರಲ್ಲಿ ನಡೆಯುವ ವಿದ್ಯಾದಾನಕ್ಕೋಸ್ಕರ "ತಪೋನಿಯನ ಜಪಸಮಾಧಿಯಶೀಲ ಸಂಪನ್ನೇಯಪ್ಪ ತಪಸ್ವಿ ಗಂಗಿಕಬ್ಬೆಗಳ ಕಾಲಂಕರ್ಚಿ" ತಮಗೆ ಸಲ್ಲುವ 60 ದಿನದ ಕಾಣಿಕೆಯ ಎರಡು ಗದ್ಯಾಣದ ತೆರೆಯನ್ನು ಬಿಟ್ಟುಕೊಟ್ಟಿರುವಳು. ಕಾಳಾಮುಖ ಸನ್ಯಾಸಿನಿಯಾದ ಈ ತಪಸ್ವಿ ಗಂಗಿಕಬ್ಬೆ ಈ ಮಠಕ್ಕೆ ಮುಖ್ಯಸ್ಥಳಾಗಿರಬೇಕು (**E.I XVII ಹೊಟ್ಟೂರು ಕ್ರಿ.ಶ. 1064**). ಲಕ್ಷ್ಮೇಶ್ವರದ ಕ್ರಿ.ಶ. 1123ರ (**ಎಸ್.ಆಯ್.ಆಯ್.ಸಂ.20.ನಂ.83**) ಶಾಸನವು ಶ್ರೀ ರಾಮೇಶ್ವರದೇವರ ಮಠದ ಆಚಾರ್ಯ ಬೆಳ್ಳೆಯಸಂತಾನದಲ್ಲಿ ಹುಟ್ಟಿದ ಸಾಮವೇದಿಪಂಡಿತರ ಶಿಷ್ಯ ಅಗಸ್ತ್ಯಪಂಡಿತದೇವರ ಕಾಲ್ತೊಳೆದು ಮಠದಲ್ಲಿ ಕೌಮಾರ ವ್ಯಾಕರಣ ಹೇಳುವ ಉಪಾಧ್ಯಾಯರಿಗೆ, ಅಲ್ಲಿ ಕೇಳುವ ತಪೋಧನರ ಆಸನ, ಆಚ್ಛಾದನಕ್ಕೆ ಭೂದಾನ ನೀಡಿದ್ದನ್ನು ಹೇಳುತ್ತದೆ.

ಸವದತ್ತಿಯ (**ಎಸ್.ಆಯ್.ಆಯ್.ಸಂ.20.ನಂ.83**) ಕ್ರಿ.ಶ. 1123ರ ಶಾಸನವು ಶ್ರೀ ರಾಮೇಶ್ವರದೇವರ ಮಠದ ಆಚಾರ್ಯ ಬೆಳ್ಳೆಯಸಂತಾನದಲ್ಲಿ ಹುಟ್ಟಿದ ಸಾಮವೇದಿಪಂಡಿತರ ಶಿಷ್ಯ ಅಗಸ್ತ್ಯಪಂಡಿತದೇವರ ಕಾಲ್ತೊಳೆದು ಮಠದಲ್ಲಿ ಕೌಮಾರ ವ್ಯಾಕರಣ ಹೇಳುವ ಉಪಾಧ್ಯಾಯರಿಗೆ, ಅಲ್ಲಿ ಕೇಳುವ ತಪೋಧನರ ಆಸನ, ಆಚ್ಛಾದನಕ್ಕೆ ಭೂದಾನ ನೀಡಿದ್ದನ್ನು ಹೇಳುತ್ತದೆ. ಮೇಲಿನ ಶಾಸನಗಳಲ್ಲಿರುವ ಸಾಮವೇದಿಪಂಡಿತನು ರಾಮೇಶ್ವರ ದೇವರ ಮೇಲ್ವಿಚಾರಣೆಯೊಂದಿಗೆ ಅಲ್ಲಿ ನಡೆಯುತ್ತಿದ್ದ ಶಿಕ್ಷಣದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದನು.

ಬಂದಳಿಕೆಯ (**EC Vol. VII ® Shikaripur No. 242**) ಕ್ರಿ.ಶ. 1163ರ ಶಾಸನದಲ್ಲಿ ಮಾಚೆಯನಾಯಕನು ಬಂದಣಿಕೆಯ ಪುರದಲ್ಲಿ ಲಿಂಗಪ್ರತಿಷ್ಠೆಯನ್ನು ಮಾಡಿ ದೇವಾಲಯದ ಮಾಟಕೂಟ ಪ್ರಾಸಾದಕ್ಕೆ ಮತ್ತು ಅಲ್ಲಿಯ ತಪೋಧನರ ಆಹಾರಕ್ಕೆಂದು ನೀಡಿದ ದಾನದ ಉಲ್ಲೇಖವಿದೆ.

ಕ್ರಿ.ಶ. 1139ರ ದೇಶಾಣಿಯ (**ಇ.ಸಿ. 5, ನಂ. 17**) ಶಾಸನವು ಲಕುಳ ಸಹದೇವರ ಪುತ್ರ ಗಂಗರಾಶಿ ಪಂಡಿತರ ದೀಕ್ಷಾಪುತ್ರ ತ್ರಿಭುವನಶಕ್ತಿ ಪಂಡಿತರ ತಮ್ಮ ವಾಮಜೀಯರ ಉಲ್ಲೇಖ. ವಾಮಶಕ್ತಿ ಪಂಡಿತರು ತಮ್ಮ ಐವರು ಮಕ್ಕಳೊಂದಿಗೆ ಸಂತೋಷದಿಂದ ಇದ್ದಾಗ ಚಂದ್ರಗ್ರಹಣದ ಸಂಕ್ರಾಂತಿಯ ಸಂದರ್ಭದಲ್ಲಿ ಊರಿನ ಐವತ್ತೊಕ್ಕಲುರು, ಗೌಡರು ವಾಮಜೀಯರ ಕಾಲ್ತೋಳೆದು ಬಿಟ್ಟಿರುವ ಭೂಮಿ 2 ಸಲಗೆ, ಅರಳಿಕೆರೆಯ ತೂಬಿನ ಬಳಿ 1 ಸಲಗೆ ಗದ್ದೆ, ನಡುಹಾಳ ಅರಳಿಕೆರೆಯ 6 ಮತ್ತರು ಭೂಮಿಯನ್ನು, ಹೆಗ್ಗಡೆಯ ಕೆರೆಯೊಳಗೆ, ಕಿರುಕೆರೆಯ ಕೆಳಗೆ ಗದ್ದೆಯನ್ನು ಚೈತೇಶ್ವರ ದೇವರ ಅಂಗ-ರಂಗಭೋಗ ನಂದಾದೀವಿಗೆ, ನೈವೇದ್ಯ, ತಪೋಧನರ ಆಹಾರ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದಾನ ಬಿಡಲಾದ ವಿವರ.

ಹಲಕೂರು (**ಇ.ಸಿ.ಸಂ.05.ಅರಸಿಕೆರೆ, ನಂ.02**) ಗ್ರಾಮದ ಮಹಾಪ್ರಭು ನಾರಸಿಂಗಗೌಡ ಮತ್ತು ಸಮಸ್ತ ಪ್ರಜೆಗೌಂಡಗಳು ಸೇರಿಕೊಂಡು ಕಲಿದೇವರ ನೈವೇದ್ಯ, ನಂದಾದೀವಿಗೆ, ಅಂಗಭೋಗಕ್ಕೆಂದು ಲಾಕಾಕುಳಾಗಮಸಮಯ ಸಮುದ್ಧರಣರುಂ ಎಕ್ಕೋಟಿಮುನೀಂದ್ರ ವಂದನಾನಂದರೂ ಶ್ರೀ ರಾಮನಾಥದೇವ ಪಾದಾರಾಧಕರೂ ಆದ ಕೇತಜೀಯರ ಶಿಷ್ಯ ದೇವೇಂದ್ರ ಶಕ್ತಿ ಪಂಡಿತರು, ಶಿಷ್ಯ ರಾಜಸಕ್ತಿ." ಈ ಮೂವರ ಕಾಲು ತೊಳೆದು ದತ್ತಿ ಬಿಟ್ಟಿರುವರು. ಕ್ರಿ.ಶ. 1124ರ ಸುಮಾರಿಗೆ ದೇಕವ್ವೆಯಂಥ



Scanned with OKEN Scanner

ಮಹಿಳೆಯರು ಶೈವ ಆಚಾರ್ಯರ ಸರಿಸಮನಾಗಿ ಪಾದಪ್ರಕ್ಷಾಲನೆ ಮಾಡಿಸಿಕೊಂಡು ದತ್ತಿ ಸ್ವೀಕರಿಸಿದ ಘಟನೆ ಇಲ್ಲಿ ಪ್ರಮುಖವೆನಿಸುತ್ತದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರಿನ **(ಕ.ವಿ.ಶಾ.ಸಂ.2, ಯಲ್ಬುರ್ಗಾ, ನಂ.52)** ಕ್ರಿ.ಶ. 1178ರ ಶಾಸನದ ಪ್ರಕಾರ ಜೇಷ್ಠಾದೇವಿ ಪರಮ ಆರಾಧಕನಾದ ಕಳೇಶ್ವರ ಮುನಿಯು ಆ ದೇವಾಲಯದ ಸ್ಥಾನಾಚಾರ್ಯನಾಗಿದ್ದು 'ಸಿದ್ಧಾಂತಿ ಕಳೇಶ್ವರ' ಎಂಬ ಬಿರುದು ಧರಿಸಿದ್ದನಲ್ಲದೆ 'ಸಕಳೋರ್ವ್ವರೆ ಮೆಚ್ಚಲು ಮಾಂತ್ರಿಕ ತಾಂತ್ರಿಕ ಯಾಂತ್ರಿಕರ್ಕ್ಳಂ ಮೆಚ್ಚಿಸಿ ಮಾಂ । ತ್ರಿಕನೆನೆ ತಾಂತ್ರಿಕನೆನೆ ಯಾಂ । ತ್ರಿಕನೆನೆ ಧರೆಸೊಗಯಿಪಂ ಕಳೇಶ್ವರದೇವಂ॥ ಅಂದರೆ ಕಳೇಶ್ವರ ಪಂಡಿತನು ಸಿದ್ಧಾವಳಿ, ದೇವಾವಳಿ, ಸಿದ್ಧಾಂತವಳಿ, ಶಿವಾಗಮಾವಳಿಗಳು, ಮಾಂತ್ರಿಕ-ತಾಂತ್ರಿಕ, ಯಾಂತ್ರಿಕರನ್ನು ಮೆಚ್ಚಿಸಿದ ಮಾಂತ್ರಿಕ-ತಾಂತ್ರಿಕ-ಯಾಂತ್ರಿಕನಿವನು. ಇವನು ಮಂತ್ರಜ್ಞ, ದೈವಜ್ಞ, ಶೈವಾಗಮಸರ್ವಜ್ಞ ಶಬ್ದಜ್ಞ, ಶಾಸ್ತ್ರಜ್ಞ, ತರ್ಕಜ್ಞ, ಕಾವ್ಯಜ್ಞನಾಗಿದ್ದನು. ಈ ಮುನಿಯು ತಿಳಿಯದೇ ಇರುವ ಸಿದ್ಧಾಂತಗಳು ಧರೆಯ ಮೇಲಿಲ್ಲ. ಇಂಥ ಮಹಾನ್ ಪಾಂಡಿತ್ಯವನ್ನು ಪಡೆದಿರುವ ಸಿದ್ಧಾಂತಿಯಿಂದ ಜೇಷ್ಠಾದೇವಿಯು ಪೂಜಿತಳಾಗಿದ್ದಳು ಈ ದೇವಿಗೆ ಕುಕನೂರು ಅಗ್ರಹಾರದ ಬ್ರಾಹ್ಮಣರೇ ಭಯದಿಂದ ನಡುಗುತ್ತಿದ್ದರು.

ಕಲ್ಲಂಗೆರೆಯ **(ಇಸಿ.10(ಹೊಸ)ನಂ.149)** ಕ್ರಿ.ಶ. 1142ರ ಶಾಸನವು "ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಷಟ್ಕರ್ಮ ನಿರತರುಂ ರುಗ್ಯಜುಸ್ಸಾಸಾಥರ್ವ್ವಣ ಷಡಂಗೋಪವೀತಬದ್ಧರಂ" ಎಂಬ ಉಲ್ಲೇಖವು ಕಾಳಾಮುಖ ಮುನಿಗಳು ಷಟ್ಕರ್ಮಗಳನ್ನು ಆಚರಿಸುವುದರ ಜೊತೆಗೆ ಋಗ್ವೇದ, ಯಜುರ್ವೇದ, ಸಾಮವೇಥ, ಅಥರ್ವಣವೇಧಗಳಲ್ಲಿಯೂ ಪ್ರಾವಿಣ್ಯತೆಯನ್ನು ಪಡೆದವ-ರಾಗಿದ್ದರು ಎಂದು ಹೇಳುತ್ತದೆ. ಹಗರಟಗಿ ಶಾಸನದಲ್ಲಿಯೂ "ಷಟ್ಕರ್ಮನಿರತರ್" ಎಂದು ಉಲ್ಲೇಖವಿದೆ. **(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು ಪು.181)**

ಹೊಂಬಳದ **(ಇಸಿ.ಸಂ.10.ಅರಸಿಕೆರೆ, ನಂ.06)** ಕ್ರಿ.ಶ. 1183ರ ಶಾಸನವು ಕೆಂಗಣಬ್ಬೆಯಂಬವಳ ಪಾದಗಳನ್ನು ಭಕ್ತಿಯಿಂದ ಅರ್ಚಿಸುತ್ತ ಕಾಳಾಮುಖ ವಾಮಶಕ್ತಿ ಮಹಾರುದ್ರಶಕ್ತಿ ನರಗುಂದದ ಬೆಟ್ಟದಲ್ಲಿ ತಪಸ್ಸನ್ನಾಚರಿಸುತ್ತದ್ದನು ಎಂದು ಹೇಳುತ್ತದೆ. ಈ ಕೆಂಗಣಬ್ಬೆ ಕಾಳಾಮುಖ ಸನ್ಯಾಸಿನಿಯಾಗಿರುವ ಸಾಧ್ಯತೆ ಇದೆ. ಕಾಲ ಕಳೆದಂತೆ ಬ್ರಹ್ಮಚಾರಿಗಳಿಗೆ ಮಾತ್ರ ಮೀಸಲಾಗಿದ್ದ ಸ್ಥಾನಾಚಾರ್ಯರ ಹುದ್ದೆಯನ್ನು ಸಂಸಾರಿಗಳಾಗಿ ಜೀವನ ಸಾಗಿಸುವ ಮುನಿಗಳೂ ಸಹ ವಹಿಸಿಕೊಂಡಿರುವ ಉಲ್ಲೇಖಗಳು ಕಲ್ಯಾಣದ ಚಾಲುಕ್ಯರ ಕಾಲದ ಅಂತ್ಯಾವಧಿಯಿಂದ ಹೊಯ್ಸಳರ ಆರಂಭದ ಶಾಸನಗಳಲ್ಲಿ ಸಿಗುತ್ತದೆ.

ಮಠಗಳಲ್ಲಿ ಎಲ್ಲಾ ವರ್ಗದವರಿಗೂ ಪ್ರವೇಶವನ್ನು ನೀಡುತ್ತಿದ್ದರಿಂದ ಅದು ಎಲ್ಲರಿಗೂ ಆಶ್ರಯ ತಾಣವಾಗಿತ್ತು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಬಳ್ಳಿಗಾವಿಯ ಕೋಡಿಯಮಠ ವ್ಯಾಪಾರಿ ವರ್ಗದವರಿಗೂ ಆಶ್ರಯತಾಣವಾಗಿತ್ತು. ಹೀಗಾಗಿ ಈ ಮಠಗಳನ್ನು 'ನಕರಂ ರಕ್ಷಿಸುವರ್' ಎಂದು ಉಲ್ಲೇಖಿಸುತ್ತದೆ. ಸುಮಾರು 35ಕ್ಕೂ ಹೆಚ್ಚು ಶಾಸನಗಳು ಮಠದ ಕಾರ್ಯಗಳನ್ನು ಮೆಚ್ಚಿಕೊಂಡು ನಕರರು ದಾನಗಳನ್ನು ಕೊಟ್ಟಿರುವುದನ್ನು ಹೇಳುತ್ತವೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ಕೆಲವು ಸಂಜೆಯ ಮಠಗಳಲ್ಲಿಯು ಸಾಯಂಕಾಲದ ಸಮಯಕ್ಕೆ ಪುರಾಣ, ಪ್ರವಚನ, ಕೀರ್ತನೆಗಳು ಜರುಗುತ್ತಿದ್ದವು. ಸಾಮಾನ್ಯ ಜನರೂ ಈ ಸಂದರ್ಭದಲ್ಲಿ ಭಾಗವಹಿಸುವುದರ ಮೂಲಕ ಸಾಮೂಹಿಕ ಶಿಕ್ಷಣವನ್ನು ಪಡೆಯುತ್ತಿದ್ದರು. ಗುಲ್ಬರ್ಗಾ ಜಿಲ್ಲೆಯ ದಿಗ್ಗಾವದ ಕ್ರಿ.ಶ. 1107ರ .ಶಾಸನವೊಂದರಲ್ಲಿ ಸಂಜೆಯ ಮಠದಲ್ಲಿ ಇದ್ದ ಯತಿಗಳು, ಅಲ್ಲಿಯ ಜನರಿಗೆ ಧಾರ್ಮಿಕ ಉಪದೇಶ ಹೇಳುತ್ತಿದ್ದುದನ್ನು ಹಾಗೂ ಮತ್ತು ಜನರು ಅದನ್ನು ಅಲಿಸುತ್ತಿದ್ದ ಕುರಿತಾಗಿ ಶಾಸನವು ಹೀಗೆ ವಿವರಿಸುತ್ತದೆ. "ಚಿಕ್ಕಸಂಜೆಮಠದಲು ನೆಲೆಸಿದ ಶ್ರ(ಶ್ರೀ) । ಜನಾರ್ದ್ಧನ ದೇವರ ಧರ್ಮಮಂ ಮಹಾಜನ ಕೊಪ್ಪಿಸತಾ ಧರ್ಮಮಂತಮ್ಮದಾಗಿ । ಪರಿಗ್ರಹಿಸಿಯೂ ದೇವರ ಪೂಜೆ ಮನಸ್ಕಾರಕ್ಕೆ । ಧಾರಾಪೂರ್ವಕ ಮಾಗಿಶ್ರ(ಶ್ರೀ) ಎಂದು ಹೇಳುವುದರಿಂದ ಆ ಅವಧಿಯಲ್ಲಿ ಪ್ರತಿದಿನ ಸಂಜೆಯ ಮಠದಲ್ಲಿ ಸಾಮೂಹಿಕವಾಗಿ ಧಾರ್ಮಿಕ ಉಪದೇಶ ನಡೆಯುತ್ತಿತ್ತು ಎಂಬುವುದು ತಿಳಿದುಬರುತ್ತದೆ. **(ಎಸ್.ಆಯ್.ಆಯ್.ಸಂ.09.ಭಾಗ 1. ನಂ.158, ಕ್ರಿ.ಶ. 1128)**

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಕ್ರಿ.ಶ. 1252ರ **(ಇ.ಸಿ.1.ನಂ.1)** ಮುನವಳ್ಳಿಯ ಶಾಸನ 'ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನನುಷ್ಠಾನ ಜಪತಪ ಸಮಾಧಿಶೀಲ ಗುಣಸಂಪಂನರುಂ ಯಜನ ಯಾಜನಾ ಧ್ಯನಾಧ್ಯಾಪನ ದಾನಪ್ರತಿಗ್ರಹ ಷಟ್ಕರ್ಮನಿರತರುಂ ರುಗವೇದ ಸಾಮವೇದ ಯಥರ್ವ್ವಣ ಯಜುರ್ವೇದ ವೇದಾಂತ ಷಟುತರ್ಕ, ವ್ಯಾಕರಣ, ಛಂದಸ್ಸು, ನಿಘಂಟು, ಕಾವ್ಯ, ನಾಟಕ, ಸಕಳ, ವಿದ್ಯಾವಿನೋದರುಂ ವ್ಯಾಸ ಅಗಸ್ತ್ಯದೂರ್ವ್ವಸ ವಿಶ್ವಾಮಿತ್ರನಾರದಾದಿ ದಿವ್ಯಮುನಿ ಚಾರಿತ್ರರುಂ ಭಸ್ಮೋದ್ಧೂಳಿತ ಗಾತ್ರರುಂ ಕಲುಹೀನಾಂ ಜನರುಂ ರುದ್ರಾಕ್ಷ ಮೂಲಧಾರರುಂ ಲಾಕುಳಾಗಮ ಸಮಯ ಸಮುದ್ಧರರುಂ' ಎಂದು ಶಾಸನ ಇವರ ಆಚರಣೆಗಳನ್ನು ಅವರ ಪಾಂಡಿತ್ಯವನ್ನು ಪರಿಚಯಿಸಿದೆ. ಜಪ, ತಪಸ್ಸು,



Scanned with OKEN Scanner

ನಾಲ್ಕು ವೇದಗಳು, ವ್ಯಾಕರಣ, ಲಾಕುಳಾಗಮ ಇತ್ಯಾದಿಗಳ ಅಧ್ಯಯನ ಮಾಡುವುದರೊಂದಿಗೆ ಷಟ್ಕರ್ಮಗಳ ಆಚರಣೆಯನ್ನು ಕಾಳಾಮುಖರು ಮಾಡುತ್ತಿದ್ದರೆಂದು ಗುರುತಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಪುನೇದಹಳ್ಳಿಯ **(ಇ.ಸಿ.ಸಂ.7.(ಹೊಸ) ಶಿಕಾರಿಪುರ.ನಂ.149)** ಕ್ರಿ.ಶ. 1282ರ ಶಾಸನವು "ಸ್ವಸ್ತಿಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೌನಾನುಷ್ಠಾನ ಜಪತಪಸಮಾಧಿ ಸೀಲಗುಣ ಸಂಪನ್ನರುಂ। ಯಜನ ಯಾಜನ ಅಧ್ಯಯನ ಅಧ್ಯಾಪನ ಪ್ರತಿಗ್ರಹಶಟುಕರ್ಮ್ಮನಿರತರುಂ। ಔಪಾಸನಾ ಅಗ್ನಿಹೋತ್ರ ದ್ವಿಜಗುರುದೇವತಾ ಪೂಜಾ ತತ್ಪರುಂ । ರುಗ್ಯಜಸುಸಾಮ ಅಥರ್ಮಣಚತುರ್ವ್ವೇದ ವೇದಾಂಗ ಶಟುಕಂ ಬ್ಯಾಕರಣಸ್ಮೃತಿಪುರಾಣಾಗಮಾಧಿ ಚತುಃಶ್ಟಿ ಕಳಾಪರಿಣತರುಮಪ್ಪ।" ಎಂಬ ಉಲ್ಲೇಖವು ಕಾಳಾಮುಖರು ಷಟ್ಕರ್ಮದಲ್ಲಿ ನಿರತರಾದವರು, ಅಗ್ನಿ, ದ್ವಿಜ, ಗುರು, ದೇವರುಗಳ ಪೂಜಾರಾಧಕರು, ನಾಲ್ಕು ವೇದ, ವೇದಾಂಗಗಳು, ವ್ಯಾಕರಣ, ಸ್ಮೃತಿ, ಪುರಾಣ, ಆಗಮಗಳಲ್ಲಿ ಪಾಂಡಿತ್ಯವನ್ನು ಪಡೆದವರು ಎಂಬರ್ಥ ಕೊಡುತ್ತದೆ.

ಹೀಗೆ 20ನೇ ಶತಮಾನದ ಕೊನೆಯಲ್ಲಿ "ಸರ್ವರಿಗೂ ಶಿಕ್ಷಣ ಎಂಬ" ಯೋಜನೆಯ ಮೂಲಕ ಸರ್ಕಾರ ಎಲ್ಲರಿಗೂ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಗೆ ತಂದಿರುವುದನ್ನು ಕಾಣುವ ನಮಗೆ 10–11ನೇ ಶತಮಾನದ ಅವಧಿಯಲ್ಲಿಯೇ ಶಿಕ್ಷಣದಿಂದ ವಂಚಿತರಾದವರಿಗೂ ತಾವು ಪಡೆದುಕೊಂಡಿರುವ ಪಾಂಡಿತ್ಯವನ್ನು ಸರ್ವರಿಗೂ ಶಿಕ್ಷಣದ ಮೂಲಕ ಪರಿಚಯಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಈ ಕಾಳಾಮುಖಯತಿಗಳು ಎಂಬುದನ್ನು ಅರಿತುಕೊಳ್ಳಬಹುದಾಗಿದೆ.